## 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

## C.C. No. 459/2018

**CW- 4** **PW:3**

| | |
|---|---|
| ಸಾಕ್ಷಿಯ ಹೆಸರು | ಃ ಶಾಂತಪ್ಪ ಮಲ್ಲಸಮುದ್ರ |
| ತಂದೆ /ಗಂಡನ ಹೆಸರು | ಃ ರಾಮಣ್ಣ |
| ವಯಸ್ಸು | ಃ 69 ವರ್ಷ |
| ಉದ್ಯೋಗ | ಃ ನಿವೃತ್ತ ನೌಕರ |
| ವಾಸಸ್ಥಳ | ಃ ನವನಗರ, ಹುಬ್ಬಳ್ಳಿ |

ದಿಃ **15.05.2025.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ**

ಅಗಸ್ಟ್ 2012 ರಿಂದ ಅಕ್ಟೊಬರ್ 2013 ವರೆಗೆ ಮುಥೂಟ್ ಫೈನಾನ್ಸ ನವನಗರ ಶಾಖೆಯಲ್ಲಿ ಬ್ರ್ಯಾಂಚ್ ಮಾನೇಜರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2012 ನೇ ಇಸವಿಯಲ್ಲಿ ಆರೋಪಿ ನಂ.1 ಮತ್ತು 2 ಆರು ಬಾರಿ ನಮ್ಮ ಬ್ಯಾಂಕಿಗೆ ಬಂದು ಬಂಗಾರದ ಮೇಲೆ ಸಾಲ ಕೇಳಿಕೊಂಡು ಬಂದಿದ್ದರು. ನಾನು ಬಂಗಾರದ ಆಭರಣಗಳು ಹಾಗೂ ದಾಖಲೆಗಳನ್ನು ಪರಿಶೀಲನೆ ಮಾಡಿ ನಮ್ಮ ಶಾಖೆ ವತಿಯಿಂದ ಅವರಿಗೆ ಸುಮಾರು 9 ಲಕ್ಷಗಳಷ್ಟು ಸಾಲ ಮಂಜೂರು ಮಾಡಿರುತ್ತೇನೆ. ಸದರಿ ಸಾಲದ ಖಾತೆಗಳ ಸಂಖ್ಯೆ ಹಾಗೂ ಯಾವ ಆಭರಣಗಳು ಇದ್ದವು ಎಂಬುದರ ಬಗ್ಗೆ ಈಗ ನನಗೆ ನೆನಪಿಲ್ಲ. 2013 ರಲ್ಲಿ ಪೊಲಿಸರು ನಮ್ಮ ಬ್ಯಾಂಕಿಗೆ ಬಂದು ತಿಳಿಸಿದಾಗ ಆರೋಪಿ ನಂ.1 ಮತ್ತು 2 ನಮ್ಮ ಬ್ಯಾಂಕಿನಲ್ಲಿ ಅಡವಿಟ್ಟ ಬಂಗಾರದ ಆಭರಣಗಳು ಕಳ್ಳತನ ಮಾಡಿದ ಆಭರಣಗಳಾಗಿರುತ್ತವೆಂದು ನಮಗೆ ಗೊತ್ತಾಯಿತು. ಕಳುವಾದ ಆಬರಣಗಳು ಆದಕಾರಣ ಸದರಿ ಆಭರಣಗಳನ್ನು ಪೊಲಿಸರು ಪಂಚನಾಮೆಯನ್ನು ಜರುಗಿಸಿ ವಶಕ್ಕೆ ಪಡೆದುಕೊಂಡರು. ಪಂಚನಾಮೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ಜಪ್ತು ಪಂಚನಾಮೆಯ ಧೃಡಿಕೃತ ಪ್ರತಿಯನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯೆ ನಮ್ಮ ಬ್ಯಾಂಕಿನಲ್ಲಿ ಸುಮಾರು 6 ಬಾರಿ ಬಂಗಾರದ ಆಭರಣಗಳನ್ನು ಅಡವಿಟ್ಟ ಸಾಲ ಪಡೆದ ವ್ಯಕ್ತಿಯಾಗಿರುತ್ತಾನೆ. ಈ ವಿಷಯದ ಬಗ್ಗೆ ನಾನು ತನಿಖಾಧಿಕಾರಿಯವರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿತರಿಗೆ ಸಾಲ ನೀಡುವ ಸಮಯದಲ್ಲಿ ಅವರ ಆಧಾರ ಕಾರ್ಡ್, ಪ್ಯಾನ್ ಕಾರ್ಡ್ ಹಾಗೂ ಚಾಲನಾ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತದೆ.

**(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎ.ಪಿ.ಪಿ. ಯವರಿಂದಃ**

ಆರೋಪಿತರು ಸಾಲದ ಖಾತೆಯ ಸಂಖ್ಯೆ 2043 ತೆರೆದಿದ್ದರು ಎಂದರೆ ಇರಬಹುದು. ಆರೋಪಿ ನಂ.1 ಈತನು ಸಾಲದ ಖಾತೆ ಸಂಖ್ಯೆ ಎಮ್ ಎಸ್ ಎಲ್ 5549 ರ ದಿನಾಂಕಃ 31-10-2012 ಮುಖಾಂತರ 55,000/- ರೂಗಳನ್ನು ಪಡೆದು ಎರಡು ಬಂಗಾರದ ಬಿಲವಾರಗಳನ್ನು ಅಡವಿಟ್ಟಿರುತ್ತಾರೆ ಎಂದರೆ ಸರಿ, ಸಾಲದ ಖಾತೆಯ ಸಂಖ್ಯೆ ಎಮ್ ಎಸ್ ಎಲ್ 5550 ರ ಮುಖಾಂತರ 55,000/- ರೂಗಳನ್ನು ದಿನಾಂಕಃ 31-10-2012 ರಂದು ಪಡೆದು ಎರಡು ಬಂಗಾರದ ಬಿಲ್ವಾರಗಳನ್ನು ಅಡವಿಟ್ಟಿರುತ್ತಾರೆ ಎಂದರೆ ಸರಿ, ಸಾಲದ ಖಾತೆಯ ಸಂಖ್ಯೆ ಎಮ್ ಇ ಎಲ್ 2601 ರ ಮುಖಾಂತರ ದಿನಾಂಕಃ 17-12-2012, 77,000/- ರೂಗಳನ್ನು ಪಡೆದು ಒಂದು ಬಂಗಾರದ ಲಾಂಗ್ ನೆಕ್ಲೆಸ್ ಅಡವಿಟ್ಟಿರುತ್ತಾರೆ ಎಂದರೆ ಸರಿ, ಸಾಲದ ಖಾತೆಯ ಸಂಖ್ಯೆ ಎಮ್ ಇ ಎಲ್ 2611 ರ ಮುಖಾಂತರ ದಿನಾಂಕಃ 20-12-2012, 25,700/- ರೂಗಳನ್ನು ಪಡೆದು ಎರಡು ಬಂಗಾರದ ಉಂಗುರಗಳು ಅಡವಿಟ್ಟಿರುತ್ತಾರೆ ಎಂದರೆ ಸರಿ, ಸಾಲದ ಖಾತೆಯ ಸಂಖ್ಯೆ ಎಮ್ ಇ ಎಲ್ 2732 ರ ಮುಖಾಂತರ ದಿನಾಂಕಃ 25-01-2013, 75,000/- ರೂಗಳನ್ನು ಪಡೆದು ಒಂದು ಬಂಗಾರದ ನೆಕ್ಲೆಸ್, ಒಂದು ಬಂಗಾರದ ಅವಲಕ್ಕಿ ಸರ, ಒಂದು ಬಂಗಾರದ ಸುತ್ತುಂಗುರ ಒಂದು ಜೊತೆ ಬೆಂಡವಾಲೆ ಅಡವಿಟ್ಟಿರುತ್ತಾರೆ ಎಂದರೆ ಸರಿ, ಸಾಲದ ಖಾತೆಯ ಸಂಖ್ಯೆ ಎಮ್ ಎಸ್ ಎಲ್ 5898 ರ ಮುಖಾಂತರ ದಿನಾಂಕಃ 01-03-2013, 64,000/- ರೂಗಳನ್ನು ಪಡೆದು ಒಂದು ಬಂಗಾರದ ಚೈನ್, ಒಂದು ಜೊತೆ ಬಂಗಾರದ ಜುಮಕಿ, ಒಂದು ಜೊತೆ ನಂಗಾರದ ಬೆಡವಾಲೆ ಅಡವಿಟ್ಟಿರುತ್ತಾರೆ ಎಂದರೆ ಸರಿ.

2. ಆರೋಪಿ ನಂ.2 ಇವರು ಸಹ ನಮ್ಮ ಬ್ಯಾಂಕಿನಿಂದ ಬಂಗಾರ ಆಭರಣಗಳನ್ನು ಅಡವಿಟ್ಟು ದಿಃ 12.11.2012 ರಿಂದ ದಿಃ 02.02.2013 ರವರೆಗೆ ಒಟ್ಟು 5 ಬಾರಿ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಆರೋಪಿ ನಂ.2 ಈತನು ಖಾತೆ ಸಂಖ್ಯೆ ಎಮ್ ಇ ಎಲ್ 2483 ರ ಮುಖಾಂತರ ದಿಃ 12.11.2012 ರಂದು ಬಂಗಾರದ ಸುತ್ತುಂಗುರ, ಒಂದು ಬಿಳಿ ಹರಳಿನ ಬಂಗಾರದ ಉಂಗುರ, ಒಂದು ಬಂಗಾರದ ಫ್ಯಾನ್ಸಿ ಡಿಸೈನ್ ಉಂಗುರ, ಒಂದು ಬಂಗಾರದ ಬೇಬಿ ಉಂಗುರ, ಒಂದು ಜೊತೆ ಬಂಗಾರದ ಜುಮಕಿ, ಒಂದು ಜೊತೆ ಬಂಗಾರದ ಬೆಂಡವಾಲೆ ಒಟ್ಟು ತೂಕ 27.90 ಗ್ರಾಂ ಅಡವಿಟ್ಟು ರೂ 55,000/- ಸಾಲ ಪಡೆದಿರುತ್ತಾರೆ ಎಂದರೆ ಸರಿ, ಅದೇ ರೀತಿ ಖಾತೆ ಸಂಖ್ಯೆ ಎಮ್ ಇ ಎಲ್ 2529 ರ

ಮುಖಾಂತರ ದಿಃ 26.11.2012 ರಂದು ಬಂಗಾರದ ನೆಕ್ ಚೈನ್, ಬಂಗಾರದ ಕಿವಿಯೊಲೆ, ಎರಡು ಬಂಗಾರದ ಉಂಗುರಗಳು ಒಟ್ಟು ತೂಕ 15.40 ಗ್ರಾಂ ಅಡವಿಟ್ಟು ರೂ 28,000/- ಸಾಲ ಪಡೆದಿರುತ್ತಾರೆ ಎಂದರೆ ಸರಿ, ಖಾತೆ ಸಂಖ್ಯೆ ಎಮ್ ಇ ಎಲ್ 2569 ರ ಮುಖಾಂತರ ದಿಃ 07.12.2012 ರಂದು ಬಂಗಾರದ ಬಳೆಗಳು, ಬಂಗಾರದ ಬಲ್ಬ ಮಾಟದ ಚೈನ್, ಒಟ್ಟು ತೂಕ 49.60 ಗ್ರಾಂ ಅಡವಿಟ್ಟು ರೂ 1,00,000/- ಸಾಲ ಪಡೆದಿರುತ್ತಾರೆ ಎಂದರೆ ಸರಿ, ಖಾತೆ ಸಂಖ್ಯೆ ಎಮ್ ಎಸ್ ಎಲ್ 5808 ರ ಮುಖಾಂತರ ದಿಃ 02.02.2013 ರಂದು ಬಂಗಾರದ ಫ್ಯಾನ್ಸಿ ಬಳೆ, ಬಂಗಾರದ ಅವಲಕ್ಕಿ ಸರ, ಬಂಗಾರದ ವಿ ಮಾಟದ ಚೈನ್, ಬಂಗಾರದ ಸಣ್ಣ ಮಕ್ಕಳ ಚೈನ್, ಎರಡು ಬಂಗಾರದ ಫ್ಯಾನ್ಸಿ ಉಂಗುರಗಳು, ಒಂದು ಜೊತೆ ಬಂಗಾರದ ಜುಮಕಿ ಬೆಂಡವಾಲೆ, ಒಂದು ಜೊತೆ ಬಂಗಾರದ ಕಿವಿಯೊಲೆ ಒಟ್ಟು ತೂಕ 57.60 ಗ್ರಾಂ ಅಡವಿಟ್ಟು ರೂ 1,20,000/- ಸಾಲ ಪಡೆದಿರುತ್ತಾರೆ ಎಂದರೆ ಸರಿ.

3. ಆರೋಪಿ ನಂ.1 ಮತ್ತು 2 ಮೇಲೆ ಹೇಳಿದ ಬಂಗಾರದ ಆಭರಣಗಳು ಕಳುವು ಮಾಡಿದ ಆಭರಣಗಳು ಎಂದು ಗೊತ್ತಿದ್ದರೂ ಸಹ ನಮ್ಮ ಬ್ಯಾಂಕಿಗೆ ಮೋಸ ವಂಚನೆ ಮಾಡುವ ಉದ್ದೇಶದಿಂದ ಸದರಿ ಬಂಗಾರದ ಆಬರಣಗಳು ತಮ್ಮ ಸ್ವಂತದ್ದು ಎಂದು ಸುಳ್ಳು ಹೇಳಿ ಅವುಗಳನ್ನು ನಮ್ಮ ಹತ್ತಿರ ಅಡವಿಟ್ಟು ಸಾಲ ಪಡೆದಿರುತ್ತಾರೆ ಎಂದರೆ ಸರಿ.

**ಪಾಟಿಸವಾಲುಃ ಆರೋಪಿ ನಂ.1 ಪರ ವಕೀಲರು ಗೈರು ಹಾಜರಿದ್ದು ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**(**ಶ್ರೀಮತಿ ದೀಪಾ ಜಿ ಮನೇರಕರ**)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.